ಏರು ಧ್ವನಿಯಲ್ಲಿ ಕರೆದು ಮನೆಯ ಹೊಸ್ತಿಲಿನಲ್ಲಿ ವಾಂತಿ ಮಾಡಿಹೋಗುವ ದೃಶ್ಯ ನೋಡಿದ್ದ. ಆಗ ಅದು ಹೊಲಸಾಗಿ ಕಂಡಿತ್ತು. ಇಂದು ಅದೊಂದು ಪವಿತ್ರವಾದ ಕ್ರಿಯೆ ಎಂದು ಗುರುಪಾದನಿಗೆ ಅನಿಸುತ್ತಿತ್ತು.

ಮನೆಗೆ ಹಿಂತಿರುಗುವಾಗ ಅದೇ ಜೀರಂಪತಿ ಮಳೆ. ಪ್ರತೀ ಸಿಗ್ನಲ್‌ನಲ್ಲಿರುವ ಮೂವತ್ತಕ್ಕೂ ಹೆಚ್ಚು ಕ್ಯಾಮರಾಗಳು ತನ್ನನ್ನೇ ನೋಡುತ್ತಿವೆ ಎಂದು ಭಾಸವಾಗುತ್ತಿತ್ತು. ನೋಡದೇ ಮುದ್ರಿಸಿಕೊಳ್ಳುವ, ಬೇಕಾದಾಗ ನೋಡುವ ಈ ಹೊಸ ಕ್ರಿಯೆಗೆ ಹೆದರಿದ. ಏನಿಲ್ಲವೆಂದರೂ ಇಪ್ಪತ್ತಕ್ಕೂ ಹೆಚ್ಚು ಬಸುರಿಯರು... ಕೆಲವರು ಸೈಕಲ್ಲಿನ ಮೇಲೆ ಕೆಲವರು ನಡೆದುಕೊಂಡು ಹೋಗುತ್ತಿದ್ದರು. ಗುರುಪಾದ ಅವರನ್ನು ನೋಡಿ 'ತಾಯಿಯೊಂದಿಗೆ ಮಗುವೂ ಈ ಜಗತ್ತನ್ನು ಹೇಗೆ ಎದುರಿಸುತ್ತಿದೆ' ಎಂದು ಅಂದುಕೊಂಡ.

ಸುಮಾರು ದಿನಗಳವರೆಗೂ ಸೀಯೊನ್ ಕುಳಿತುಕೊಳ್ಳುವ ಜಾಗದಲ್ಲಿ ಯಾರೂ ಕುಳಿತುಕೊಳ್ಳುತ್ತಿರಲಿಲ್ಲ. ಆ ಜಾಗದ ಹತ್ತಿರ ಹೋಗಿ ಇಲ್ಲಿ ಯಾರೂ ಕುಳಿತುಕೊಳ್ಳುವುದಿಲ್ಲವೆ ಎಂದು ಕೇಳಿದರೆ, ಅಲ್ಲಿದ್ದವರು 'ನೀವು ಕುಳಿತು ಕೊಳ್ಳಬಹುದು' ಎಂದು ಗುರುಪಾದನಿಗೆ ತಮಾಷೆ ಮಾಡುತ್ತಿದ್ದರು. ಹಾಗೆ ಒಂದು ದಿವಸ ನೋಡನೋಡುತ್ತಿದ್ದಂತೇ ಒಂದು ವ್ಯಾನಿಟಿ ಬ್ಯಾಗ್ ಪ್ರತ್ಯಕ್ಷವಾಯಿತು. ಅರೆ ಈ ಬ್ಯಾಗ್ ಸೀಯೊನಳದ್ದು ಎಂದು ಆಶ್ಚರ್ಯದಿಂದ ಹೋಗಿ ಪಕ್ಕದವರನ್ನು ಕೇಳಿದ ಗುರುಪಾದ. ಅಲ್ಲಿದ್ದವರೂ 'ಹೌದು ಹೌದು... ಇದು ಅವಳದ್ದೇ' ಎಂದರು. 'ಏನಂತೆ... ಯಾಕೆ ಬಂದಿದ್ದಾಳೆ?' ಎಂದ. ಅದಕ್ಕೆ ಅವರು 'ಆದಿನ ಯಾವ ಕಾಗದ ಪತ್ರದ ಕೆಲಸವಾಗಿರಲಿಲ್ಲ. ಇಂದು ಅವಳು ಎಲ್ಲರ ಹತ್ತಿರ ಸಹಿ ತೆಗೆದುಕೊಂಡು ಫುಲ್ ಅಂಡ್ ಫೈನಲ್ ಮಾಡಿಕೊಂಡು ಹೋಗುತ್ತಿದ್ದಾಳೆ' ಎಂದರು.

ಗುರುಪಾದ ಅವಳಿಗೆ ಸಿಗುವುದು ಬೇಡ ಎಂದು ಅಂದುಕೊಂಡ.

## ಸಚ್ಚಿದಾನಂದ ಹೆಗಡೆ

ಹೊಸ ತಲೆಮಾರಿನ ಕತೆಗಾರ ಸಚ್ಚಿದಾನಂದ ಹೆಗಡೆ ಭಾರತ ಮತ್ತು ಯುರೋಪ್‌ಗಳಲ್ಲಿ ಉನ್ನತ ಶಿಕ್ಷಣ ಪಡೆದಿದ್ದಾರೆ. ಅಮೆರಿಕ, ಯುರೋಪ್ ಮತ್ತು ಭಾರತದಲ್ಲಿ ತಮ್ಮ ವೃತ್ತಿ ಮುಂದುವರಿಸಿ ಈಗ ಚೀನಾ ದೇಶದ ಕಾರ್ ಡಿಸೈನ್ ಕಂಪೆನಿಯೊಂದರಲ್ಲಿ ಡಿಸೈನ್ ಡೈರೆಕ್ಟರ್ ಹುದ್ದೆಯಲ್ಲಿದ್ದಾರೆ. ಪ್ರಸ್ತುತ ಅವರು ಬೀಜಿಂಗ್‌ನಲ್ಲಿ ನೆಲೆಸಿದ್ದಾರೆ.
ಅವರ ಪ್ರಕಟಿತ ಕಥಾಸಂಗ್ರಹಗಳು: 'ಕಾರಂತಜ್ಜನಿಗೊಂದು ಪತ್ರ' 'ಮರೆವಿನ ಬಳ್ಳಿ'. ಯಕ್ಷಗಾನ ಕಲಾವಿದ ಕೆರೆಮನೆ ಮಹಾಬಲ ಹೆಗಡೆಯವರ ಜೀವನ ಚರಿತ್ರೆ 'ಮಹಾಬಲ'ದ ಸಹ ಲೇಖಕರು. ಅವರ ಕತೆ 'ಕಾರಂತಜ್ಜನಿಗೊಂದು ಪತ್ರ' ಸಿನಿಮಾ ಆಗಿದೆ.